Karnatak Law Society's
**Vishwanathrao Deshpande Institute of Technology**
**(Approved by AICTE, New Delhi. Affiliated to VTU, Belagavi)**
**(Recognised Under Section 2(f) by UGC, New Delhi)**
**Udyog Vidya Nagar, Haliyal – 581329, Dist: Uttar Kannada (Karnataka)**
**Phone: 08284-220861, 220334, 221409, Fax: 08284-220813**
**www.klsvdit.edu.in principal@klsvdit.edu.in**

Date: 29-12-2022

**ಪತ್ರಿಕಾ ಪ್ರಕಟಣೆ:**

# ಕ್ರೀಡಾಪಟುಗಳಿಗೆ ಪುರಸ್ಕಾರ

ಕೆ. ಎಲ್. ಎಸ್. ವಿ. ಡಿ. ಐ. ಟಿ. ಹಳಿಯಾಳದಲ್ಲಿ ಕ್ರೀಡಾ ಕ್ಷೇತ್ರದಲ್ಲಿ ಸಾಧನೆಗೈದ ಮಹಾವಿದ್ಯಾಲಯದ ವಿದ್ಯಾರ್ಥಿಗಳನ್ನು ಡಿಸೆಂಬರ್ 28ರಂದು ಪುರಸ್ಕರಿಸಲಾಯಿತು. ರಾಷ್ಟ್ರಮಟ್ಟದ ಅಂತರ್ ವಿಶ್ವವಿದ್ಯಾಲಯಗಳ ಜುಡೋ, ಕುಸ್ತಿ ಮತ್ತು ಕಬ್ಬಡಿ ಸ್ಪರ್ಧೆಗೆ ಆಯ್ಕೆಯಾಗಿರುವ ಕುಮಾರಿ.ವೀಣಾ ಸಿದ್ನಾಳ್, ಕುಮಾರಿ. ಭುವನೇಶ್ವರಿ ಕೆ ಎನ್, ಕು. ಸಂಭಾಜಿ ಪಿ ಪಾಟೀಲ್ ಅವರನ್ನು ಮಹಾವಿದ್ಯಾಲಯದ ಆಡಳಿತ ಮಂಡಳಿಯ ಅಧ್ಯಕ್ಷರಾದ ಶ್ರೀ. ವಿನಾಯಕ ಲೋಕುರ್ ಅವರು ಸನ್ಮಾನಿಸಿದರು.ಕುಮಾರಿ. ವೀಣಾ ಸಿದ್ನಾಳ್ ರಾಜ್ಯಮಟ್ಟದ ಅಂತರ್ ಕಾಲೇಜುಗಳ ಜಡೋ ಸ್ಪರ್ಧೆಯಲ್ಲಿ ಸ್ವರ್ಣ ಪದಕ ಪಡೆದಿರುತ್ತಾಳೆ. ರಾಜ್ಯಮಟ್ಟದ ಅಂತರ್ ಕಾಲೇಜುಗಳ ಜೂಡೋ ಮತ್ತು ಕುಸ್ತಿ ಸ್ಪರ್ಧೆಯಲ್ಲಿ ರಜತ ಮತ್ತು ಕಂಚಿನ ಪದಕ ಗಳಿಸಿದ ಕುಮಾರಿ. ಪ್ರತೀಕ್ಷಾ, ಕುಸ್ತಿ ಸ್ಪರ್ಧೆಯಲ್ಲಿ ಕಂಚಿನ ಪದಕ ಗಳಿಸಿದ ಕು. ರಘುನಾಥ್ ಎಂ, ಕು. ರಿತೀಶ್, ವಿಭಾಗ ಮಟ್ಟದ ಅಂತರ್ ಕಾಲೇಜುಗಳ ವಾಲಿಬಾಲ್ ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನ ಗಳಿಸಿದ ಕು. ಅರುಣ್ ಜಿ, ಕು. ಧೀರಜ್ ಪಿ, ಕು. ಆದಿತ್ಯ, ಕು. ಸೂರಜ್ ಎಂ, ಕು. ಅತಿಕರ ಎಸ್, ಕು. ಬಸವರಾಜ್ ಬಿ, ಕು. ಪ್ರತಾಪ್ ಜಿ, ಕು. ತಿರುಮಲ ಎಂ, ಕು. ರಾಮು ವಡ್ಡರ್, ಕು.ಸುದರ್ಶನ, ಕು. ನವೀನ್ ಬಿ, ಕು. ರಕ್ಷಿತ್ ಜಿ, ವಿಭಾಗಮಟ್ಟದ ಅಂತರ್ ಕಾಲೇಜುಗಳು ಕಬ್ಬಡಿ ಪಂದ್ಯಾವಳಿಯಲ್ಲಿ ದ್ವಿತೀಯ ಸ್ಥಾನ ಗಳಿಸಿದ .ಕು. ಮಂಜುನಾಥ ಎಂ,ಕು. ಕಿರಣ್ ಎನ್, ಕು. ಗುರುಬಸಯ್ಯ ಹೆಚ್,ಕು.ತಾನಾಜಿ ಬಿ ,ಕು.ಅಭಿಲಾಷ್ ಡಿ. ಕು. ಮಯೂರ ಪಿ, ಕು. ತಾನಾಜಿ ಎಂ, ಕು. ತುಷಾರ್ ಜೆ, ಕು. ಸಾಂಭಾಜಿ ಪಿ, ಕು. ದಿಲೀಪ್ ಕೆ, ಕು. ಶ್ರೀನಿವಾಸ್ ಪಿ, ಕು. ರಘುನಾಥ ಡಿ, ವಿಭಾಗ ಮಟ್ಟದ ಅಂತರ ಕಾಲೇಜುಗಳ ಟೇಬಲ್ ಟೆನಿಸ್ ಪಂದ್ಯಾವಳಿಯಲ್ಲಿ ಉತ್ತಮ ಪ್ರದರ್ಶನ ತೋರಿದ ಕು. ರಜತ್, ಕು.ಸಂದೀಪ್ ಡಿ, ಕು. ಕಾರ್ತಿಕ್ ಎಸ್ ಮತ್ತು ಕು. ಪ್ರತೀಕ್ ಎಚ್ ಇವರುಗಳನ್ನು ಇದೇ ಸಂದರ್ಭದಲ್ಲಿ ಪುರಸ್ಕರಿಸಲಾಯಿತು. ಶ್ರೀ. ವಿನಾಯಕ ಲೋಕುರ್ ಅವರು ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ. ಗದಿಗೆಪ್ಪ ಯಳ್ಳೂರ್ ಅವರ ಪರಿಶ್ರಮವನ್ನು ಶ್ಲಾಘಿಸುತ್ತ, ಕ್ರೀಡಾಪಟುಗಳನ್ನು ಹುರಿದುಂಬಿಸಿದರು. ಪ್ರಾಚಾರ್ಯರಾದ ಡಾ. ವಿ. ಎ. ಕುಲಕರ್ಣಿಯವರು ಮಾತನಾಡುತ್ತ ಕ್ರೀಡಾಕ್ಷೇತ್ರದಲ್ಲಿ ಮಹಾವಿದ್ಯಾಲಯದ ಸಾಧನೆ ತೃಪ್ತಿದಾಯಕವಾಗಿದ್ದು, ಸಾಧನೆಗೈದ ಕ್ರೀಡಾಪಟುಗಳಿಗೆ ಅಭಿನಂದನೆ ಸಲ್ಲಿಸಿದರು. ಮುಂದಿನ ದಿನಗಳಲ್ಲಿ ಕ್ರೀಡಾಕ್ಷೇತ್ರದಲ್ಲಿ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಇನ್ನೂ ಹೆಚ್ಚಿನ ಸಾಧನೆ ಮಾಡಲಿ ಎಂದು ಎಲ್ಲಾ ಬೋಧಕ ಬೋಧಕೇತರ ಸಿಬ್ಬಂದಿಗಳು ಶುಭ ಹಾರೈಸಿದರು.

ಪ್ರಾಂಶುಪಾಲರು

**Principal**
**KLS Vishwanathrao Deshpande Institute of Technology, Haliyal**


ATAK LAW SOCIETY'S
ATHRAO DESHPANDE
TE OF TECHNOLOGY
HALIYAL
ಹಳಿಯಾಳ